ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 1, March-April 2025, Pp. 72-83
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೊರೋನಾ ವಿಪತ್ತಿನೊಳಗೊಂದು ಜೀವನ ಪಾಠ

**ಮಹದೇವಸ್ವಾಮಿ ಎಂ[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]**
[1]ಸಂಶೋಧನಾ ವಿದ್ಯಾರ್ಥಿ, [2] ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು

***Abstract:***
*ಜಗತ್ತಿನಲ್ಲಿ ಕೋಟ್ಯಾಂತರ ಜನರ ದೇಹವನ್ನು ಹೊಕ್ಕಿದ ಕೊರೋನಾ ವೈರಾಣು ಲಕ್ಷಾಂತರ ಮಂದಿ ಪ್ರಾಣವನ್ನು ನುಂಗಿತು. ಬಲಿಷ್ಠ ರಾಷ್ಟ್ರಗಳು ಈ ವೈರಾಣುವಿಗೆ ಸೋತು ಶರಣಾದವು. ಬಡ ರಾಷ್ಟ್ರಗಳ ದುರ್ಗತಿಯನ್ನು ಹೇಳತೀರದು. ಶ್ರೀಮಂತರ, ಸೆಲೆಬ್ರಿಟಿಗಳ ಸೊಕ್ಕನ್ನು ಇಳಿಸಿತು. ವಿಜ್ಞಾನಕ್ಕೆ ಸವಾಲಾದ ಕೊರೋನಾ ಅನೇಕ ವೈದ್ಯರನ್ನು ಬಲಿ ಪಡೆಯಿತು. ಮನುಷ್ಯನ ದಿನನಿತ್ಯದ ಚಟುವಟಿಕೆಗಳೆಲ್ಲವು ಒಮ್ಮೆಲೆ ಬದಲಾದವು. ಮಕ್ಕಳಿಗೆ ಆಟೋಟ, ಪಾಠ ಪರೀಕ್ಷೆಗಳಿಲ್ಲ, ಮನೆಮಂದಿಗೆಲ್ಲ ಗೃಹ ಬಂಧನ, ದುಡಿದು ತಿನ್ನುವವರಿಗೆ ಉದ್ಯೋಗವಿಲ್ಲ, ಆದಾಯವಿಲ್ಲ. ಹೀಗೆ ಅನೇಕ ಸಮಸ್ಯೆಗಳನ್ನು ತಂದೊಡ್ಡಿತು. ಕೋವಿಡ್-19 ನಮಗೆ ಜೀವನದ ಹಲವು ಪಾಠಗಳನ್ನು ತಿಳಿಸಿತು. ಹೀಗೆ ಕೊರೋನಾ ಸನ್ನಿವೇಶದಲ್ಲಿ ಎದುರಾದ ಅನೇಕ ಸಮಸ್ಯೆಗಳು, ಸಾವು ನೋವುಗಳಿಂದ ರೂಢಿಸಿಕೊಳ್ಳಬೇಕಾದ ಜೀವನ ಶೈಲಿಯನ್ನು ಡುಂಡಿರಾಜರು ಹಾಸ್ಯ ಧಾಟಿಯ ಮೂಲಕ ತಮ್ಮ ಹನಿಗವನಗಳಲ್ಲಿ ವ್ಯಕ್ತಪಡಿಸಿದ್ದಾರೆ.*

***Keywords:*** *ಕೊರೋನಾ, ಕೋವಿಡ್-19, ಲಾಕ್‌ಡೌನ್, ಸ್ವಚ್ಛತೆ, ಆರೋಗ್ಯ, ಮಾಸ್ಕ್, ಸಾವು, ವಿಶ್ವ ಆರೋಗ್ಯ ಸಂಸ್ಥೆ.*

**ಪೀಠಿಕೆ**

ಮನುಷ್ಯ ಪ್ರಕೃತಿಯ ಮುಂದೆ ಬಹಳ ಸಣ್ಣವನು. ಆತ ವೈಜ್ಞಾನಿಕವಾಗಿ ಹೊಸ ಹೊಸ ಆವಿಷ್ಕಾರಗಳನ್ನು ಸೃಷ್ಟಿಸಿ ಮಹತ್ತರವಾದ ಸಾಧನೆಗೈಯುತ್ತಿರುವುದು ಈ ಪ್ರಕೃತಿಯನ್ನು ಅನುಸರಿಸಿಯೇ ಎಂಬುದನ್ನು ಮರೆಯಬಾರದು. ಅಂತೆಯೇ ನಿಸರ್ಗದತ್ತವಾದ ಈ ಭೂಮಿಗೂ, ಹೊಸದೊಂದು ಸೃಷ್ಟಿಸುವ ಮನುಷ್ಯನಿಗೂ ಅವಿನಾಭಾವ ಸಂಬಂಧವಿದೆ. ಹೊಸದಾಗಿ ಆವಿಷ್ಕರಿಸುವ ಮನುಷ್ಯ ಪ್ರಕೃತಿಯನ್ನು ಮೀರಿ ಏನನ್ನೂ ಸಾಧಿಸಲಾರ. ಒಮ್ಮೆ ಸಾಧಿಸಿದ್ದೆ ಆದರೇ ತನ್ನನ್ನು ಒಳಗೊಂಡಂತೆ ಪ್ರಕೃತಿಯ ವಿಪತ್ತಿಗೆ ಕಾರಣವಾಗುತ್ತಾನೆ. ಭಾಗಶಃ ಅಲ್ಲದಿದ್ದರೂ ಅದು ವಿನಾಶದ ದಾರಿಯೇ ಎಂಬುದನ್ನು ಅರಿಯಬೇಕು.

ಹಗಲು, ರಾತ್ರಿ, ಗಾಳಿ, ಬೆಳಕು, ಗುಡುಗು, ಮಿಂಚು, ಮಳೆ, ಬಿಸಿಲು ಹೀಗೆ ಅನೇಕ ಪ್ರಕೃತಿ ಸಹಜ ಹಾಗೂ ಕೆಲವು ಅಗೋಚರವಾದ ವೈಶಿಷ್ಟ್ಯತೆಗಳನ್ನು ಮನುಷ್ಯ ಇಂದು ಕಂಡುಕೊಂಡಿದ್ದಾನೆ. ಜೊತೆಗೆ ಅದಕ್ಕೆ ಕಾರಣಗಳನ್ನು ಕೂಡ ನಿಖರವಾಗಿ ನೀಡುತ್ತಿದ್ದಾನೆ. ತಾನು ವಾಸಿಸುವ

***Please cite this article as:*** ಮಹದೇವಸ್ವಾಮಿ ಎಂ ಮತ್ತು ಬಿ.ಪ್ರಭುಸ್ವಾಮಿ. (2025). ಕೊರೋನಾ ವಿಪತ್ತಿನೊಳಗೊಂದು ಜೀವನ ಪಾಠ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 72–83

ಗ್ರಹದ ಬಗ್ಗೆ ಅಲ್ಲದೆ ಇತರೆ ಗ್ರಹಗಳ ಮಾಹಿತಿಯನ್ನು ನೀಡುವ ಮತ್ತು ಅಲ್ಲಿ ವಾಸಿಸುವ ಯೋಜನೆಯನ್ನು ಕೈಗೊಂಡಿದ್ದಾನೆ. ಈ ಎಲ್ಲಾ ಬೆಳವಣಿಗೆಗಳು ಹೆಮ್ಮೆಪಡುವ, ಸಂತೋಷಿಸುವ ವಿಷಯಗಳೇ ಆಗಿದ್ದರೂ ಪ್ರಕೃತಿಯು ಇದರಿಂದ ನಿಧಾನಗತಿಯಲ್ಲಿ ನಾಶವಾಗುತ್ತಿದೆ ಎಂಬುದನ್ನು ಮರೆಯಬಾರದು. ಪ್ರಕೃತಿಗೆ ನಾವು ಮಾಡಿರುವ ಅನಾಹುತ ಹೇಗಿದೆ ಎಂದರೇ ಬಹುಪಾಲನ್ನು ಮತ್ತೆ ಯಥಾಸ್ಥಿತಿಗೆ ತರುವುದು ಸಾಧ್ಯವಿಲ್ಲದಷ್ಟು ನಾಶಗೊಳಿಸಿದ್ದೇವೆ. ಕೇವಲ ದೇಶದ, ಜಗತ್ತಿನ ಅಭಿವೃದ್ಧಿಯ ಬಗ್ಗೆ ಯೋಚಿಸುತ್ತಾ ಮನುಷ್ಯ ತನ್ನ ಇರುವಿಕೆಯನ್ನು ಭದ್ರಪಡಿಸಿಕೊಳ್ಳುತ್ತ ಇಂದು ಪ್ರಕೃತಿಯನ್ನು ನಾಶಗೊಳಿಸುತ್ತಿದ್ದಾನೆ. ಈ ತಪ್ಪಿನ ಪ್ರಾಯಶ್ಚಿತವಾಗಿ ಇಂದು ಅನೇಕ ಸಾವು ನೋವುಗಳನ್ನು ಅನುಭವಿಸುತ್ತಿದ್ದಾನೆ. ಭೂಕಂಪನಗಳು, ಸುನಾಮಿ, ಜಲಪ್ರಳಯ, ಅತಿ ಹೆಚ್ಚು ತಾಪಮಾನ, ವಿನಾಶಕಾರಿ ವೈರಾಣುಗಳು ಮುಂತಾದ ವೈಪರೀತ್ಯಗಳು ಪ್ರಕೃತಿಯಲ್ಲಿ ಸ್ವಾಭಾವಿಕವಾದವುಗಳೇ ಎನಿಸಿದರೂ ಇದರ ಅತಿರೇಖದ ಕೆಡಕಿನ ಮೂಲ ಮನುಷ್ಯನೂ ಆಗಿದ್ದಾನೆ. 'ಭವಿಷ್ಯದ ಚಿಂತೆಯೇ ಇಲ್ಲದೆ ಇಡೀ ಮಾನವ ಜನಾಂಗವು ಜಗತ್ತಿನ ಸಂಪನ್ಮೂಲಗಳನ್ನು ಕಬಳಿಸುತ್ತ ತನ್ನ ಸಂತಾನ, ಕಶ್ಮಲಗಳಿಂದ ಭೂಭಾರವನ್ನು ಹೆಚ್ಚಿಸುತ್ತಿದೆ. ನಾಳಿನ ಪೀಳಿಗೆಯ ಜನ ಬದುಕಿ ಬಾಳುವ ಅವಕಾಶ ದಿನಗಳೆದಂತೆಲ್ಲ ಮೊಟಕಾಗುತ್ತಿದೆ'[1]. ಇದರ ಆಂತರ್ಯವನ್ನು ಅರಿಯಬೇಕಿದೆ. ಹಲವು ದಶಕಗಳಿಂದ ಜಾಗತಿಕ ನಾಯಕರು ಹವಾಮಾನ ಬದಲಾವಣೆ ತಡೆ ಕುರಿತು ಮಾತನಾಡುತ್ತಿದ್ದಾರೆಯೇ ಹೊರತು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಅಸಡ್ಡೆಯನ್ನು ತೋರುತ್ತಿದ್ದಾರೆ. ಕಾಲ ಮಿಂಚಿ ಹೋಗುತ್ತಿದೆ. ದಿನೇದಿನೆ ನಿಯಂತ್ರಣಕ್ಕೆ ಸಿಗದಷ್ಟು ತಾಪಮಾನ ಹೆಚ್ಚುತ್ತಿದೆ. ಅರಣ್ಯಗಳ ನಾಶದಿಂದ ಮಣ್ಣಿನ ಕವಚ ತೊಳೆದು ಹೋಗುತ್ತಿದೆ. ಕೆರೆಗಳು, ನದಿಗಳು, ಅಣೆಕಟ್ಟುಗಳಲ್ಲಿ ಶೀಘ್ರಗತಿಯಲ್ಲಿ ಹೂಳು ತುಂಬಿ, ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ. ಮಳೆ ನೀರನ್ನು ಭೂಮಿಯೊಳಗೆ ಇಂಗಿಸಬೇಕಿದ್ದ ಮರಗಳು ಕಡಿಮೆಯಾಗಿ ಪ್ರವಾಹದ ಹಾವಳಿ ಹೆಚ್ಚುತ್ತಿದೆ. ಭೂಕುಸಿತ ಅತಿಯಾಗುತ್ತಿದೆ. ಅಂತರ್ಜಲಗಳು ಕಡಿಮೆಯಾಗಿ ಬೇಸಿಗೆಯಲ್ಲಿ ನದಿಗಳು ಬತ್ತ ತೊಡಗಿವೆ. ಪರಿಸರದ ವೈಪರೀತ್ಯದ ಬಿಸಿ ನಮ್ಮ ನೆತ್ತಿಯನ್ನು ಸುಡತೊಡಗಿದೆ. ಇವೆಲ್ಲದರ ಪರಿಣಾಮವನ್ನು ಅನುಭವಿಸುತ್ತಿದ್ದರೂ ಮನುಷ್ಯ ನಿಸರ್ಗದತ್ತವಾಗಿರುವುದನ್ನು ಇಂದು ಕೃತಕವಾಗಿಸಿ ಅಗತ್ಯಕ್ಕಿಂತ ಹೆಚ್ಚಾಗಿ ಬಳಸಿ ವ್ಯಯ ಮಾಡುತ್ತಿದ್ದಾನೆ. ಪ್ರಕೃತಿಯ ವಿನಾಶದೊಂದಿಗೆ ತನ್ನ ವಿನಾಶಕ್ಕೂ ಎಡೆಮಾಡಿಕೊಳ್ಳುತ್ತಿದ್ದಾನೆ.

ಆಧುನಿಕತೆಯ ಅವಸರದಲ್ಲಿ ನೈಸರ್ಗಿಕ ವೈವಿಧ್ಯತೆಗಳನ್ನು ವಿರೂಪಗೊಳಿಸಿ ವ್ಯತ್ಯಾಸಗಳನ್ನು ರೂಪಿಸುವ ಪ್ರಯೋಗಾತ್ಮಕ ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಅದರ ಸಾಧಕ, ಬಾಧಕಗಳ ಅರಿವಿದ್ದರೂ ಅದರ ಉಪಯೋಗವನ್ನಷ್ಟೆ ಯೋಚಿಸುತ್ತಿದ್ದಾನೆ. ತಂತ್ರಜ್ಞಾನದಿಂದ ಮನುಷ್ಯ ಇಂದು ಸಾಕಷ್ಟು ಅಭಿವೃದ್ಧಿಯನ್ನೂ ಸಾಧಿಸಿದ್ದಾನೆ. ಜೊತೆಗೆ ಅದರ ಪರಿಣಾಮವನ್ನು ಎದುರಿಸುತ್ತಿದ್ದಾನೆ. ತಂತ್ರಜ್ಞಾನ ವಿಕಾಸಬೇಕು ನಿಜ. ತ್ಯಾಜ್ಯ ಪದಾರ್ಥಗಳ ಪುನರ್ಬಳಕೆ, ಪರಿಸರ ಮಾಲಿನ್ಯದ ಹತೋಟಿ, ಮುಂತಾದ ಪರಿಸರ ಪೂರಕ ತಂತ್ರಜ್ಞಾನಗಳ ಅವಶ್ಯಕತೆ ಇದೆ. ಆದರೆ ತಂತ್ರಜ್ಞಾನದಿಂದಲೇ ಈ ಭೂಮಿಯ ಹಿಡಿತ ಸಾಧಿಸುತ್ತೇವೆ ಎಂಬುದಕ್ಕೆ ಕಡಿವಾಣ ಹಾಕಬೇಕಿದೆ. ದೇಶ ವಿದೇಶಗಳನ್ನು ಹಿಡಿತ ಸಾಧಿಸುವ ಭರದಲ್ಲಿ ತಾನೇ ತನ್ನ ಮರಣವನ್ನು ಬರೆದುಕೊಳ್ಳುತ್ತಿದ್ದಾನೆ. ಅದಕ್ಕೆ ಒಂದು ಉದಾಹರಣೆ ಎಂದರೇ ಕೊರೋನಾ ಎಂಬ ವೈರಾಣು.

ಕೊರೋನಾ ಇಡೀ ಜಗತ್ತನ್ನೆ ಮಾರಣ ಹೋಮವನ್ನಾಗಿಸಿತು. ಸುಮಾರು ಎರಡು, ಮೂರು ವರ್ಷಗಳ ಕಾಲ ತನ್ನ ವಿಕೃತಿಯನ್ನು ಮೆರೆದು ಕೋಟ್ಯಾಂತರ ಜೀವಗಳನ್ನು ನುಂಗಿತು. ಬಡವ–ಬಲ್ಲಿದ, ಮೇಲು–ಕೀಳು ಎಂಬ ಯಾವ

ಭೇದವೆಣಿಸದ ಕೊರೋನಾ ಲೆಕ್ಕವಿಲ್ಲದಷ್ಟು ಹೆಣಗಳನ್ನು ಕಣ್ಣ ಮುಂದೆಯೇ ಉರುಳಿಸಿತು. ಕೆಲವರು ವೈರಾಣುವಿನಿಂದ ಜೀವ ಕಳೆದುಕೊಂಡರೆ ಹಸಿವಿನಿಂದ ಅಸುನೀಗಿದ ಎಷ್ಟೋ ಮಂದಿ ಉಂಟು. ಪೆಟ್ಟು ತಿಂದ ಪ್ರಕೃತಿ ಮೊದಲು ಪ್ರತಿಭಟಿಸಿತು. ಯಾರು ಈ ಪ್ರತಿಭಟನೆಯನ್ನು ಲಕ್ಷ್ಯಕ್ಕೆ ತಾರದೆ ಇದ್ದಾಗ ಇದರ ಪ್ರಕೋಪ ಹೆಚ್ಚಾಯಿತು. ಇದರ ಪರಿಣಾಮದಿಂದಾಗಿ ದಿನನಿತ್ಯದ ಕಾರ್ಯಚಟುವಟಿಕೆಗಳು, ಜನಜಂಗುಳಿ, ಹೊಸ ಆವಿಷ್ಕಾರಗಳು, ಕೈಗಾರಿಕೆಗಳ ಕಾರ್ಯ ವೈಖರಿಗಳೆಲ್ಲವು ಸ್ಥಗಿತಗೊಂಡವು. ಇದು ಎಂದೋ ಆಗಬೇಕಿತ್ತು ಆದರೆ ಪ್ರಕೃತಿ ಅಪರಿಮಿತ ಕ್ಷಮಾಶೀಲತೆಯ ಗುಣವನ್ನು ಹೊಂದಿದೆ. ಮನುಷ್ಯನ ವಿನಾಶಕಾರಿ ಬುದ್ಧಿಗೆ ಕೊರೋನಾ ವೈರಸ್ ಬಹಳಷ್ಟು ಪಾಠವನ್ನು ತಿಳಿಸಿದೆ. ಮಿತಿಮೀರಿದ ಅವನ ಆಲೋಚನೆಗೆ ಅಲ್ಪ ವಿರಾಮವನ್ನು ನೀಡಿತು. ಕ್ಷಣಿಕ ಜೀವನವೆಂದು ತಿಳಿದ ಆತನ ಆರ್ಭಟಗಳೆಲ್ಲವು ನಿಂತವು. ಸ್ವಾರ್ಥದಿಂದ ತುಂಬಿದ ಮನುಷ್ಯ ಮನುಷ್ಯತ್ವವನ್ನು ಅರಿತನು. ಒಬ್ಬರನೊಬ್ಬರು ಸಹಕರಿಸುತ್ತ ಬದುಕನ್ನು ಪ್ರೀತಿಸ ತೊಡಗಿದರು. ಬದುಕಿನ ಅನೇಕ ಜಂಜಾಟಗಳಿಂದ ಮುಕ್ತಿ ಪಡೆದು ಯಾಂತ್ರಿಕ ಜೀವನಕ್ಕೆ ತುಸು ವಿಶ್ರಾಂತಿಯನ್ನು ನೀಡಿದ. ಅಕ್ಕಪಕ್ಕದವರು, ಸಂಬಂಧಿಕರು, ಕುಟುಂಬದ ಜೊತೆ ಬೆರೆತು ಬದುಕಿನ ಮೌಲ್ಯವನ್ನು ಅರಿತುಕೊಂಡನು. ಇವೆಲ್ಲವು ಪರಿಪೂರ್ಣವಾಗಿ ಅಲ್ಲದಿದ್ದರು ಅಲ್ಪವಾದರೂ ಬದಲಾಗಿವೆ. ಹೀಗೆ ಕೊರೋನಾ ವೈರಾಣು ಸಂಕಷ್ಟದ ಜೊತೆ ಜೀವನದ ಪರಿಪಾಠವನ್ನು ತಿಳಿಸಿದೆ ಎಂಬುದು ನಮ್ಮ ಅರಿವಿಗೆ ಬಂದಿದೆಯಾದರೂ ಅದನ್ನು ವಿಶೇಷವಾಗಿ ತಿಳಿಸಿಕೊಟ್ಟದ್ದು ವಿವಿಧ ರೀತಿಯ ಸಾಹಿತ್ಯ, ಕಥೆ, ಕಾದಂಬರಿ, ನಾಟಕ, ಕವಿತೆಗಳಂತಹ ಸಾಹಿತ್ಯದ ಮೂಲಕವೂ ಕೊರೋನಾದ ಪರಿಚಯ ನಮಗಾಗಿದೆ. ಆದರೆ ಅದನ್ನು ವಿಶೇಷವಾಗಿ ಹಾಸ್ಯ ಧಾಟಿಯ ಮೂಲಕ ವಿಡಂಬನಾತ್ಮಕವಾಗಿ, ಮಾರ್ಮಿಕವಾಗಿ ಚಿತ್ರಿಸಿ ಜನಸಾಮಾನ್ಯರಿಗೂ ತಲುಪುವಂತೆ ಮಾಡಿದ್ದು ಎಚ್. ಡುಂಡಿರಾಜ್ ಅವರ ಹನಿಗವನಗಳು.

ಕೊರೋನ ಸಂದರ್ಭದಲ್ಲಿ ಎಲ್ಲವು ಸ್ತಬ್ಧಗೊಂಡರು ಮೊಬೈಲ್, ಟಿ.ವಿ, ರೇಡಿಯೋಗಳು ಮಾತ್ರ ಹೆಚ್ಚು ಸದ್ದುಮಾಡಿದವು. ದಿನ ಬೆಳಗಾದರೆ ಸಾವು ನೋವುಗಳು, ಗಾಬರಿಯುಟ್ಟಿಸುವಂತಹ ವಿಷಯಗಳೇ ಹೆಚ್ಚು ಪ್ರಸಾರವಾಗುತ್ತಿದ್ದವು. ಆಗಾಗ ಮನರಂಜನೆ ನೀಡುವಂತಹ ಅನೇಕ ಕಾರ್ಯಕ್ರಮಗಳು ಸಹ ಬಿತ್ತರಗೊಳ್ಳುತ್ತಿದ್ದವು. ಅವುಗಳಲ್ಲಿ ಹಾಸ್ಯ ದರ್ಬಾರ್, ನಗೆಹನಿ, ನಗೆ ಚಟಾಕಿಗಳಲ್ಲಿ ಬಳಸುವ ಹನಿಗವನಗಳೂ ಈ ಗುಂಪಿಗೆ ಸೇರಿಕೊಳ್ಳುತ್ತವೆ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟ್ಟರ್, ವಾಟ್ಸಾಪ್ ಮುಂತಾದವುಗಳಲ್ಲಿ ಎಚ್. ಡುಂಡಿರಾಜರ ಹನಿಗವನಗಳು ಹರಿದಾಡಿದವು. ಆ ಮೂಲಕ ಹನಿಗವನಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆದವು. ಸಾಮಾಜಿಕ ಜಾಲತಾಣಗಳು ಕೇವಲ ಮನರಂಜಿಸುವುದಷ್ಟೇ ಅಲ್ಲದೆ ಅದು ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರಬೇಕು. ಇಲ್ಲಿ ಹಂಚಿಕೊಳ್ಳುವ ಹನಿಗವನಗಳು ಸಹ ಆ ನಿಟ್ಟಿನಲ್ಲಿ ಸಾಮಾಜಿಕ ಕಳಕಳಿಯನ್ನು ಹೊಂದಿವೆ. ದೈನಂದಿನ ಚಟುವಟಿಕೆಗಳಲ್ಲಿ ನಡೆಯುವ ಅನೇಕ ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ತಮ್ಮದೇ ಶೈಲಿಯಲ್ಲಿ ಅಭಿವ್ಯಕ್ತಿಸುವ ಕಲೆಗಾರಿಕೆ ಡುಂಡಿರಾಜರದು. ಅಂತೆಯೇ ಕೊರೋನಾ ಸಂದರ್ಭದಲ್ಲಿ ರಚನೆಗೊಂಡ ಡುಂಡಿರಾಜರ ಅನೇಕ ಹನಿಗವನಗಳು ಜನಸಾಮಾನ್ಯರ ಮೆಚ್ಚುಗೆಯನ್ನು ಪಡೆಯಿತು. 2020ರಲ್ಲಿ ಪ್ರಕಟಗೊಂಡ ಕೊರೋನಾರೀ ಸಹೋದರ ಎಂಬ ಹನಿಗವನ ಸಂಕಲನವು ಕೊರೋನಾದಿಂದ ಉಂಟಾದ ಸಂಕಷ್ಟಗಳನ್ನು ಹಾಗೂ ಅದರೊಳಗಿನ ಅನುಕೂಲಗಳನ್ನು ಹಾಸ್ಯಮಯವಾಗಿ, ಮಾರ್ಮಿಕವಾಗಿ ಕಟ್ಟಿಕೊಟ್ಟಿದೆ. ಪರಿಸರದ ಕಾಳಜಿ, ಸಂಬಂಧಗಳ ಮೌಲ್ಯ, ಆಡಂಬರದ ಜೀವನ,

ಇನ್ನಿತರ ಅಂಶಗಳನ್ನು ತಮ್ಮ ಹನಿಗವನಗಳಲ್ಲಿ ತಿಳಿಸಿದ್ದಾರೆ.

ಕೊರೋನಾ ಎಂದೊಡನೆ ಭಯ, ಆತಂಕಗಳೇ ಶುರುವಾಗುತ್ತವೆ. ಇಡೀ ಜಗತ್ತನ್ನೆ ತಲ್ಲಣಗೊಳಿಸಿದ ವೈರಾಣು ಮನುಷ್ಯನ ಸಾವನ್ನು ಕಣ್ಣ ಮುಂದೆಯೇ ಪ್ರದರ್ಶಿಸುತ್ತಿತ್ತು. ಊಹೆಗೂ ನಿಲುಕದ ದಿನಗಳು ಬಂದೊದಗಿದವು. ವೈರಾಣು ಅಷ್ಟು ಭೀಕರವಾಗಿದ್ದರೂ ಮನುಷ್ಯನ ತಪ್ಪಿಗೆ ಒಂದು ಕಾಲಾವಕಾಶವನ್ನು ನೀಡುತ್ತಾ, ಆತನಿಗರಿವಿಲ್ಲದ ಹಾಗೆ ಜೀವನದ ಪರಿಪಾಠವನ್ನು ತಿಳಿಸಿತು. ಅವಿರತ ಸುತ್ತಾಟ, ನಿಸರ್ಗದ ನಾಶ, ಎಲ್ಲೆ ಮೀರಿದ ಮನುಷ್ಯನ ಭೋಗಲಾಲಸೆ ಮುಂತಾದ ಎಲ್ಲಾ ಮಾಮೂಲಿ ದಿನಗಳನ್ನು ನಿಷ್ಕ್ರೀಯಗೊಳಿಸಿತು. 'ನಮ್ಮ ಮಾಮೂಲಿ ದಿನಗಳೇ ಮಹಾಮಾರಿಗೆ ಕಾರಣವಾಗಿದ್ದು'[2]. ಎಂದು ಪುಲಿಟ್ಜರ್ ಪ್ರಶಸ್ತಿ ವಿಜೇತ, ಪತ್ರಕರ್ತ ಎಡ್ ಯಂಗ್ ಹೇಳಿದ್ದೂ ದಾಖಲಾಯಿತು. ಮನುಷ್ಯನ ಯಾಂತ್ರಿಕ ಜೀವನಕ್ಕೆ ತುಸು ವಿಶ್ರಾಂತಿಯನ್ನು ನೀಡಿದ್ದು ಈ ಕೊರೋನಾ.

ಜೀವನ ನಿರ್ವಹಣೆಗೆ ಹಣದ ಅವಶ್ಯಕತೆ ಇದೆ. ಆದರೆ ಹಣವೊಂದೆ ಜೀವನವಲ್ಲ. ಆತನ ಎಲ್ಲಾ ಸಂಪಾದನೆಗಳೂ ಸುಖ, ಶಾಂತಿ, ನೆಮ್ಮದಿ, ಆರೋಗ್ಯದಾಯಕ ಬದುಕಿಗಾಗಿ ಎಂಬುದನ್ನು ಅರಿಯಬೇಕಿದೆ. ಹಣದಿಂದ ಇವೆಲ್ಲವನ್ನು ಕೃತಕವಾಗಿ ಅನುಭವಿಸುತ್ತಿದ್ದಾನೆಯೇ ಹೊರತು ಸ್ವಾಭಾವಿಕವಾಗಿ ಅಲ್ಲ ಎಂಬುದು ನಮಗೆ ತಿಳಿದ ವಿಷಯವೆ ಆಗಿದೆ. 'ಮಾನವನ ನಿಜವಾದ ಸುಖ ಮತ್ತು ಆನಂದ ಸರಳ ಜೀವನದಿಂದ ಪ್ರಾಪ್ತವಾಗುತ್ತಾವೆನ್ನುವುದು ಅವನ ಖಚಿತ ನಿಲುವು ಮಾತ್ರವಲ್ಲ, ಸ್ವಾನುಭವ ಜನ್ಯ ಅನುಭವ. ಶೋಕಿಯ ವಸ್ತುಗಳು ಮತ್ತು ಅಳತೆ ಮೀರಿದ ಜೀವನಾನುಕೂಲಗಳು ಅನಿವಾರ್ಯವಲ್ಲ. ಅದು ಮಾತ್ರವಲ್ಲ ಅವು ಮನುಕುಲದ ಔನ್ನತ್ಯಕ್ಕೆ ಮತ್ತು ಶ್ರೇಯಸ್ಸಿಗೆ ಅಡಚಣೆಗಳೆಂಬುದೇ ಅವನ ನಿಚಿತ ಮತ'[3]. ಆದರೂ ಪ್ರಸ್ತುತ ಮನುಷ್ಯ ಅದರ ಅರಿವಿಲ್ಲದೆ ದಿನವಿಡೀ ಶಬ್ದದ ಜೊತೆಗೆ ಹೊಂದಿಕೊಂಡಿದ್ದು ತನ್ನ ಹೊಂದಾಣಿಕೆಯಿಂದ ಪರಿತಪಿಸುತ್ತಿದ್ದಾನೆ. ಸುತ್ತಲಿನ ಪರಿಸರವನ್ನು ನಾಶಮಾಡುತ್ತಾ ನಿಶ್ಯಬ್ದದ, ಸ್ವಚ್ಛ ಪ್ರದೇಶವನ್ನು ಹರಸುತ್ತಿದ್ದಾನೆ. ತನ್ನ ಅತಿರೇಕತನಕ್ಕೆ ತಬ್ಬಿಬ್ಬಾದ ಮನುಷ್ಯನ ಕೂಗಿಗೆ ಹಾಗೂ ಪ್ರಕೃತಿಯ ರಕ್ಷಣೆಗೆ ಕೊರೋನಾವೆಂಬ ವೈರಾಣುವೆ ಬರಬೇಕಾಯಿತು ಎಂಬುದನ್ನು ಕವಿ ಡುಂಡಿರಾಜರು ತಮ್ಮದೇ ಶೈಲಿಯಲ್ಲಿ ಹೀಗೆ ವಿಡಂಬಿಸುತ್ತಾರೆ.

***ಲಾಕ್ ಡೌನ್‌ನಿಂದಾಗಿ***
***ಎಲ್ಲರೂ ಅವರವರ***
***ಮನೆಯೊಳಗೆ ಅರೆಸ್ಟು***
***ವಾಹನಗಳ ಭಾರ ಹೊತ್ತು***
***ಸುಸ್ತಾದ ರಸ್ತೆಗಳಿಗೆ***
***ಅಪರೂಪಕ್ಕೆ ಸಿಕ್ಕಿದೆ ರೆಸ್ಟು!***

ಕೊರೋನಾ ವೈರಾಣು ಮನುಷ್ಯನ ತಪ್ಪಿಗೆ ಶಿಕ್ಷೆಯನ್ನಷ್ಟೆ ಅಲ್ಲದೆ ಆತನಿಗೆ ನೆಮ್ಮದಿಯನ್ನು, ಸಂತೋಷವನ್ನು ನೀಡುತ್ತಾ ಎಲ್ಲ ಜೀವಸಂಕುಲಗಳಿಗೂ ಆಶ್ರಯವಾಗಿರುವ ಪ್ರಕೃತಿಯ ದಣಿವನ್ನು ನೀಗಿಸಿತು.

ಆಡಂಬರದ ಬದುಕಿಗೆ ಬರೆ ಎಳೆಯುತ್ತಾ ಆಧುನಿಕತೆಗೆ ಒಳಗಾಗಿರುವ ಮನುಷ್ಯನನ್ನು ಮತ್ತೆ ಹಳೆಯ ಸಾಂಪ್ರದಾಯಿಕ ಜೀವನ ಶೈಲಿಯ ಮಹತ್ವವನ್ನು ತಿಳಿಸಿತು. ಈ ಪ್ರಕೃತಿಯಲ್ಲಿ ಜೀವಿಸುವ ಪ್ರತಿಯೊಂದು ಜೀವಸಂಕುಲಗಳು ತಮ್ಮದೇ ಆದಂತಹ ಬದುಕಿನ ಚೌಕಟ್ಟನ್ನು ಒಳಗೊಂಡಿರುತ್ತವೆ. ಅದು ತನ್ನ ಎಲ್ಲೆಯನ್ನು ಮೀರಿದಾಗ ಈ ರೀತಿಯ ಅವಘಡಗಳು ಎದುರಾಗುತ್ತವೆ. ಮನುಷ್ಯನಿಗೆ ಈ ಪ್ರಕೃತಿಯ ಅವಶ್ಯಕತೆ ಇದೆಯೇ ಹೊರತು, ಪ್ರಕೃತಿಗೆ ಇವನ ಅವಶ್ಯಕತೆ ಇಲ್ಲ. ವಸ್ತುಸ್ಥಿತಿ ಹೀಗಿರುವಾಗ ಮನುಷ್ಯ ಪ್ರಕೃತಿಯೊಂದಿಗೆ ಬದುಕಬೇಕು. ಆದರೆ ಮನುಷ್ಯನ ಅತಿ ಆಸೆಗೆ, ವೈಭೋಗ ಜೀವನಕ್ಕೆ ಪ್ರಕೃತಿಯು ಬಲಿಯಾಗುತ್ತಿದೆ. 'ಪರಿಸರವನ್ನು ಇನ್ನೂ ವಿಷಮಗೊಳಿಸಿ ಉಸಿರು ಕಟ್ಟಿ ಸಾಯುವಂತ

ಪರಿಸರವನ್ನು ನಿರ್ಮಿಸುವ ಕಾರ್ಯದಲ್ಲಿ ಈಗ ತಲ್ಲೀನನಾಗಿದ್ದಾನೆ. ಮಾತ್ರವಲ್ಲ ತಾನು ನಿರ್ಮಿಸಿದ ಈ ಕಲುಷಿತ ವಾತಾವರಣದಲ್ಲಿ ಬಹುತೇಕ ಸಸ್ಯ-ಪ್ರಾಣಿ ಪ್ರಭೇದಗಳನ್ನು ವಿನಾಶದ ಅಂಚಿಗೆ ದೂಡಿ ಜೊತೆಗೆ ತಾನೇ ವಿನಾಶದ ಹಾದಿಯತ್ತ ಹೆಜ್ಜೆ ಇಡುತ್ತಿದ್ದಾನೆ'[4]. ಪ್ರಕೃತಿ ಮೇಲಿನ ದುಷ್ಪರಿಣಾಮಗಳು ಮನುಷ್ಯನಿಗೂ ಬೀರುತ್ತದೆ ಎಂಬುದನ್ನು ಅರಿಯಬೇಕಿದೆ. ಇಂದು ಕಾಡು, ನಾಡು ಸುಡು ಬಿಸಿಲಿನಲ್ಲಿ ಬೇಯುತ್ತಿರುವ ಅತಿ ಹೆಚ್ಚಿನ ತಾಪಮಾನವು ಕೂಡ ಮನುಷ್ಯನ ಕೊಡುಗೆಯೇ ಆಗಿದೆ. ಭೂಕುಸಿತ, ಸುನಾಮಿ, ಮೈ ಕೊರೆಯುವ ಚಳಿ ಹೀಗೆ ಅನೇಕ ವೈಪರೀತ್ಯಗಳಿಗೆ ಮನುಷ್ಯ ಕಾರಣವಾಗಿದ್ದಾನೆ. ಕೊರೋನ ಕೂಡ ಮಾನವನ ಕೊಡುಗೆಯೇ ಆಗಿದೆ. ಮನುಷ್ಯನ ಈ ಆರ್ಭಟಕ್ಕೆ ಪ್ರಕೃತಿಯೂ ಭಯಭೀತವಾಗಿ ನಲುಗುತ್ತಿರುವುದನ್ನು ಕವಿ ಹೀಗೆ ವಿಡಂಬಿಸುತ್ತಾರೆ.

***ಇನ್ನೂ ಬಂದಿಲ್ಲ ಹೊರಗೆ***
***ಮೋಡದ ಮನೆಯೊಳಗೆ***
***ಅಡಗಿ ಕೊಂಡಿದ್ದಾನೆ ಸೂರ್ಯ***
***ಬಹುಶಃ ಆತನಿಗೂ***
***ನಮ್ಮ ಹಾಗೆ***
***ಕೊರೊನಾ ವೈರಸ್ ಭಯ!***

ಜೀವರಾಶಿ ತುಂಬಿ ತುಳುಕುವ ಅಪರೂಪದ ಗ್ರಹ ಭೂಮಿ. ಇದನ್ನು ಉಳಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಆದರೆ ಮನುಷ್ಯ ಮಾಡುವ ಈ ಅನಾಹುತಗಳಿಗೆ ಪ್ರಕೃತಿಯು ಪರಿತಪಿಸುವಂತಾಗಿದೆ. ಇದರ ಪ್ರತ್ಯಕ್ಷ ಪರಿಣಾಮವು ಮನುಷ್ಯನ ಮೇಲೆ ಬೀರುತ್ತದೆ. ಈ ಸೂಕ್ಷ್ಮತೆಯನ್ನು ಅರ್ಥೈಸಿಕೊಳ್ಳದಿದ್ದರೆ ಮತ್ತಷ್ಟು ಸಮಸ್ಯೆಗಳು ಎದುರುಗೊಳ್ಳುವುದರಲ್ಲಿ ಸಂದೇಹವಿಲ್ಲ.

ಮನುಷ್ಯ ಜೀವಿಸಲು ಹಲವು ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವೂ ಸಹ ಒಂದು. ಆರೋಗ್ಯದಾಯಕ ಮತ್ತು ಸದೃಢ ದೇಹವನ್ನು ಕಾಪಾಡಿಕೊಳ್ಳಲು ಪೌಷ್ಟಿಕ ಆಹಾರ ಸೇವನೆ ಮುಖ್ಯವಾಗಿದೆ. ಹಿಂದೆ ನಮ್ಮ ಹಿರಿಯರು ದೈಹಿಕವಾಗಿ ಸದೃಢರಾಗಿದ್ದು ದಿನದ ಎಲ್ಲಾ ಕೆಲಸಗಳಲ್ಲಿ ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು ಮತ್ತು ಲವಲವಿಕೆಯಿಂದಿರುತ್ತಿದ್ದರು. ಬಹಳ ಮುಖ್ಯವಾಗಿ ಹೆಚ್ಚು ಕಾಲ ಜೀವಿಸುತ್ತಿದ್ದರು. ಇದು ಅವರ ಆಹಾರ ಪದ್ಧತಿಯಲ್ಲಿನ ಉತ್ತಮ ಕ್ರಮವಾಗಿತ್ತು. ಪ್ರಸ್ತುತ ಆಹಾರದಲ್ಲಿನ ಅಪೌಷ್ಟಿಕತೆ ಮನುಷ್ಯನಿಗೆ ಸಮಸ್ಯೆಗಳನ್ನು ತಂದೊಡ್ಡಿದೆ. ರುಚಿಕರವಾದ, ಬಣ್ಣಬಣ್ಣದ ತಿಂಡಿ, ತಿನಿಸುಗಳು ಜನ ಸಾಮಾನ್ಯರನ್ನು ಆಕರ್ಷಿಸುತ್ತಿದೆ. ಪ್ರತಿದಿನ ಅಲ್ಲದಿದ್ದರೂ ವಾರಕ್ಕೆ ಮೂರು ಬಾರಿಯಾದರು ಫಾಸ್ಟ್ ಫುಡ್, ಬಣ್ಣಬಣ್ಣದ ತಿನಿಸಿನ ಅಂಗಡಿಗಳ ಮುಂದೆ ಜಾತ್ರೆಯ ರೀತಿ ಜನ ಜಮಾಯಿಸಿರುತ್ತಾರೆ. ಇದು ನಗರ ಪ್ರದೇಶಗಳಲ್ಲಿ ಸರ್ವೇಸಾಮಾನ್ಯವಾಗಿದೆ. ಕಣ್ಣಿಗೆ ಆಕರ್ಷಣೀಯ, ಬಾಯಿಗೆ ರುಚಿ ಎಂದು ಸವಿದು ಆರೋಗ್ಯದ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಹೊಟ್ಟೆ ನೋವು, ಅಲರ್ಜಿಗಳಂತಹ ಸಮಸ್ಯೆಗಳು ಕೆಲವರಿಗೆ ಹಠತ್ತಾಗಿ ಸಂಭವಿಸಿದರೆ, ಹಲವರಿಗೆ ನಿಧಾನಗತಿಯಲ್ಲಿ ಪ್ರಭಾವವನ್ನು ಬೀರುತ್ತವೆ. 'ಸಂಸ್ಕರಿಸಿದ ಆಹಾರೋದ್ಯಮವು ಮಾನವನ ಆರೋಗ್ಯದೊಂದಿಗೆ ಆಟವಾಡುವುದಕ್ಕೆ ಬಿಡಲಾಗದು. ಸೂಪರ್ ಮಾರ್ಕೆಟ್‌ಗಳ ಕಪಾಟುಗಳಲ್ಲಿನ ಶೇ.89ರಷ್ಟು ಆಹಾರ ಉತ್ಪನ್ನಗಳು ಅನಾರೋಗ್ಯಕರ ಎಂಬುದನ್ನು ಇತ್ತೀಚಿನ ಜಾಗತಿಕ ಅಧ್ಯಾಯನವೊಂದು ಪತ್ತೆ ಮಾಡಿದೆ'[5]. ಹಾಗಾಗಿ ಸೇವಿಸುವ ಆಹಾರ ಬಗ್ಗೆ ಎಚ್ಚರವಹಿಸಬೇಕು. ಇತ್ತೀಚೆಗಷ್ಟೆ ಕರ್ನಾಟಕ ರಾಜ್ಯ ಸರ್ಕಾರ ಆರೋಗ್ಯದ ದೃಷ್ಟಿಯಿಂದ ಕ್ಯಾನ್ಸರ್‌ಕಾರಕ ಅಂಶಗಳನ್ನು ಒಳಗೊಂಡ ಕಾಟನ್ ಕ್ಯಾಂಡಿ, ಗೋಬಿ ಮಂಚೂರಿಯನ್ನು ತಯಾರಿಸಲು ಬಳಸುವ ಬಣ್ಣವನ್ನು ನಿಷೇಧಿಸಿದೆ. ಕೆಲವು ದೇಶಗಳಲ್ಲಿಯೂ ಸಹ ಈ ರೀತಿಯ ಪದಾರ್ಥಗಳನ್ನು ನಿಷೇಧಿಸಲಾಗಿದೆ. ಹೀಗೆ ಅನೇಕ ಅಪೌಷ್ಟಿಕ

ಆಹಾರಗಳ ಮೊರೆ ಹೋಗಿರುವ ಮನುಷ್ಯ ಅಜೀರ್ಣಕ್ರಿಯೆ, ಅತಿಯಾದ ಬೊಜ್ಜು, ಕ್ಯಾನ್ಸರ್ ನಂತಹ ಅನೇಕ ರೋಗಗಳಿಗೆ ಒಳಗಾಗುತ್ತಿರುವುದು ವಿಷಾದದ ಸಂಗತಿ. ಆದರೆ ಕೊರೋನಾ ಸಂದರ್ಭದಲ್ಲಿ ಈ ಎಲ್ಲಾ ತಿಂಡಿ ತಿನಿಸುಗಳಿಗೆ ವಿರಾಮವನ್ನು ಹೇಳಿದರು. ತಮ್ಮ ಮನೆಗಳಲ್ಲಿಯೇ ರುಚಿಕರ ಹಾಗೂ ಆರೋಗ್ಯದಾಯಕ ಊಟೋಪಚಾರವನ್ನು ಸವಿದರು. ಉತ್ತಮ ಆರೋಗ್ಯದಾಯಕ ದೇಹವನ್ನು ಕಾಪಾಡಿಕೊಳ್ಳುವಲ್ಲಿ ಗಮನ ಹರಿಸಿದರು. ಇದರಿಂದ ದೇಶೀಯ ಆಹಾರ ತಿನಿಸುಗಳಿಗೂ ಪ್ರಾಶಸ್ತ್ಯ ದೊರಕಿತು. ಇದು ಕೊರೋನಾ ಕಲಿಸಿದ ಊಟದ ಪಾಠವೆಂದರೂ ತಪ್ಪಗಲಾರದು. ಅದನ್ನೇ ಕವಿ ಹೀಗೆ ವಿಡಂಬಿಸುತ್ತಾರೆ.

***ಹಿಂದೆಲ್ಲ ವಾರಕೊಮ್ಮೆ ತಪ್ಪದೆ***
***ಹೋಟೆಲ್‌ಗಳಿಗೆ ಹೋಗಿ***
***ತಿನ್ನುತ್ತಿದ್ದೆವು ಚೈನೀಸ್***
***ನಾರ್ತ್, ಈಸ್ಟ್, ವೆಸ್ಟ್***
***ಈಗ ತಿಳಿಯಿತು ಅವೆಲ್ಲ ವೇಸ್ಟ್***
***ಮಡದಿಯ ತಿಳಿಸಾರೇ ಬೆಸ್ಟ್!***

ಆಹಾರ ಪದಾರ್ಥಗಳು ಕೇವಲ ಕಣ್ಣಿನ ನೋಟಕ್ಕಷ್ಟೆ ಸೀಮಿತವಾಗದೆ ಮನುಷ್ಯನ ಆರೋಗ್ಯವನ್ನು ಕಾಪಾಡುವುದು ಮುಖ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಮನೆಯಲ್ಲಿಯ ಆಹಾರವೇ ಉತ್ತಮ ಗುಣಮಟ್ಟದಲ್ಲಿರುತ್ತದೆ ಎಂಬುದನ್ನು ಕವಿ ಹೀಗೆ ವ್ಯಕ್ತಪಡಿಸುತ್ತಾರೆ.

ಆಧುನಿಕತೆಯ ಮುಸುಕನ್ನು ತೆಗೆಯಲಾರದ ಮನುಷ್ಯ ಇಂದು ಬದುಕಿನ ಶೈಲಿಯನ್ನು ವೈಭವೀಕರಿಸಿಕೊಳ್ಳುತ್ತಾ ಹೆಚ್ಚುಗಾರಿಕೆಯನ್ನು ಬಯಸುತ್ತಿದ್ದಾನೆ. ಇದು ಸಮಾಜದಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಸಮಾನತೆಯನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ. ಆಧುನಿಕತೆಯು ಸಮಾಜಕ್ಕೆ ಕಂಟಕವಾಗಿ ಪರಿಣಮಿಸುತ್ತಿದೆ. ಮನುಷ್ಯನ ಈ ಆಡಂಬರ, ಅಸಮಾನತೆಯ ಬೆಳವಣಿಗೆಗೆ ಕೊರೋನಾವು ತಡೆಯೊಡ್ಡಿತು. ಯಾವುದೇ ಮೇಲು–ಕೀಳು, ಬಡವ–ಬಲ್ಲಿದ ಎಂಬ ಭೇದಭಾವ ಮಾಡದೆ ಎಲ್ಲರನ್ನು ಆವರಿಸಿತು. ಶ್ರೇಷ್ಠ ಕನಿಷ್ಠತೆಯ ವಿರುದ್ಧ ಸಮರ ಸಾರಿತು.

ಹಬ್ಬ ಹರಿದಿನಗಳು, ಮದುವೆ ಸಂಭ್ರಮಾಚರಣೆಗಳು ನಮ್ಮಲ್ಲಿ ಸಡಗರ, ಸಂಭ್ರಮ, ಆಡಂಬರದಿಂದ ಆಚರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಇವು ಸ್ಪರ್ಧೆಗೆ ಇಳಿದಂತೆ ಕಾಣುತ್ತಿದೆ. ಒಬ್ಬರಿಗಿಂತ ಒಬ್ಬರು ಶ್ರೇಷ್ಠವೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ನಮ್ಮ ಕಾರು, ಮನೆ, ಒಡವೆ, ವಸ್ತು, ಇವು ನಮ್ಮ ಅಗತ್ಯವನ್ನು ಪೂರೈಸುವುದಕಷ್ಟೆ ಅಲ್ಲ. ನಮ್ಮ ಅಂಹಕಾರ ತೃಪ್ತಿಗೂ ಬರುತ್ತವೆ. ಅಗತ್ಯಕ್ಕಾಗಿ ಬಂದರೆ ನಮಗೆ ಹೆಚ್ಚು ಸಂತೋಷವಾಗುವುದಿಲ್ಲ ನಮ್ಮ ಅಹಂಕಾರ ತೃಪ್ತಿಗೆ ಬಂದಾಗ ನಮ್ಮ ಖುಷಿ ಹೆಚ್ಚಾಗುತ್ತದೆ. ‘ಸಾಲ ಮಾಡಿಯಾದರೂ ತುಪ್ಪ ತಿನ್ನು’ ಎನ್ನುವ ನಾಣ್ಣುಡಿಯಂತೆ ಒಂದು ದಿನದ ಸಂಭ್ರಮಕ್ಕೆ ವರ್ಷಪೂರ್ತಿ ದುಡಿಯುವ ಜನರು ನಮ್ಮಲ್ಲಿದ್ದಾರೆ. ಇಲ್ಲಿ ತಮ್ಮ ಸಂತೋಷ, ಆತ್ಮ ತೃಪ್ತಿಗಿಂತಲೂ ಇತರರನ್ನು ಅಥವಾ ಸಮಾಜವನ್ನು ಮೆಚ್ಚಿಸುವ ಕೆಟ್ಟ ಮನಸ್ಥಿತಿಯೇ ಹೆಚ್ಚಾಗಿ ಕಾಣುತ್ತದೆ. ಇದರಿಂದ ಅನೇಕ ಕುಂಟುಂಬಗಳು ಆರ್ಥಿಕ ನಷ್ಟವನ್ನು ಅನುಭವಿಸಿ ತಮ್ಮ ಜೀವಗಳನ್ನೆ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಬಹುದು. ‘ಅನುಭವಿಸುವ ಸಂಸ್ಕೃತಿಗಿಂತ ತೋರಿಕೆಯ ಸಂಸ್ಕೃತಿ ಪ್ರಧಾನ ಪಾತ್ರ ವಹಿಸುತ್ತಿರುವ ಈ ಸಂದರ್ಭದಲ್ಲಿ ಕೆಲವೇ ಮನಸ್ಸುಗಳ ದೌರ್ಬಲ್ಯ ಸಾಮಾಜಿಕ ದೌರ್ಬಲ್ಯವಾಗಿ ಪರಿವರ್ತಿತವಾಗುವ ಮಟ್ಟಿಗೆ ಆಧುನಿಕತೆ ನಮ್ಮನ್ನು ಸೆಳೆದಿದೆ’[6]. ಆದರೆ ಕೊರೋನಾವು ಈ ಎಲ್ಲಾ ಆಧುನಿಕತೆಯ ಆಡಂಬರ ಜೀವನ ಶೈಲಿಗೆ ಕಡಿವಾಣವನ್ನು ಹಾಕಿತು. ಕೊರೋನಾ ಸಂದರ್ಭದಲ್ಲಿ ಅನೇಕ ವಿವಾಹಗಳು, ಶುಭಕಾರ್ಯಗಳು ನಡೆದವು. ಆದರೆ ಈ ಯಾವ ಆಚರಣೆಗಳಲ್ಲೂ ಶಾಸ್ತ್ರ ಪುರಾಣಗಳಾಗಲಿ, ಹೆಚ್ಚಿನ ಜನಸಂಖ್ಯೆಯಾಗಲಿ, ದುಂದುವೆಚ್ಚವಾಗಲಿ, ಆಡಂಬರವಾಗಲಿ ಕಾಣಲಿಲ್ಲ,

ಅವುಗಳಿಗೆ ಆಸ್ಪದವನ್ನು ಕೊಡಲಿಲ್ಲ. ಇದರಿಂದ ಅದೆಷ್ಟೊ ಬಡ ಕುಟುಂಬದ ತಂದೆ–ತಾಯಂದಿರು ನಿಟ್ಟುಸಿರು ಬಿಟ್ಟರು. ಆರ್ಥಿಕವಾಗಿ ನಷ್ಟ ಹೊಂದದೆ, ಇತರರಿಗೂ ಬೇಸರಪಡಿಸದೆ ತಮ್ಮ ಮಕ್ಕಳ ವಿವಾಹವನ್ನು ನೆರವೇರಿಸಿದರು. ಕೆಲವೊಂದು ಮಾಧ್ಯಮಗಳ ಸರ್ವೇ ಪ್ರಕಾರ ಕೊರೋನಾ ಸಂದರ್ಭದಲ್ಲಿ ಹೆಚ್ಚು ವಿವಾಹಗಳಾದವು ಎಂಬ ವರದಿಯಿದೆ. ಆ ಹಿನ್ನೆಲೆಯಲ್ಲಿ ಕೊರೋನಾ ಸಂದರ್ಭವೇ ವಿವಾಹಗಳಿಗೆ ಹೆಚ್ಚು ಸೂಕ್ತವೆಂದು ಕವಿ ಡುಂಡಿರಾಜರು ಹೀಗೆ ಹೇಳುತ್ತಾರೆ.

***ವಿವಾಹಕ್ಕೆ ಲಾಕ್ ಡೌನ್***
***ಅತ್ಯಂತ ಪ್ರಶಸ್ತ ಸಮಯ***
***ಊಟ ತಿಂಡಿ ಖರ್ಚಿನಲ್ಲಿ***
***ಬಾರಿ ಉಳಿತಾಯ***
***ಹಾರಕ್ಕಿಂತ ಮೊದಲು ಕಡ್ಡಾಯ***
***ಮಾಸ್ಕ್ ವಿನಿಮಯ***

ವಿವಾಹಗಳಿಗೆ ಸರ್ಕಾರವೇ ಹಲವು ನಿಯಮಗಳನ್ನು ಜಾರಿಮಾಡಿದ್ದು ಬಡ ಕುಟುಂಬಗಳಿಗೆ ಸಹಕಾರಿಯಾಯಿತು. ಬಡವ–ಶ್ರೀಮಂತ ಎಂದು ಭೇದವೆಣಿಸದೆ ಎಲ್ಲರಿಗೂ ಒಂದೇ ನಿಯಮವನ್ನು ಜಾರಿಗೆ ತಂದಿತು. ಇದರಿಂದ ಸರಳ ಜೀವನ ಅನುಸರಿಸುವುದನ್ನು ಕಲಿಸಿತು. ಅಲ್ಲದೆ ಅಸಮಾನತೆಯನ್ನು ತಡೆಯಲು ಇದು ಪರೋಕ್ಷವಾಗಿ ಸಹಕರಿಸಿತು.

ಹೆಚ್ಚು ಗಳಿಕೆಯ ಧಾವಂತದಲ್ಲಿ ಮನುಷ್ಯ ತನ್ನ ಕಾಯಕ ನಿಷ್ಠೆಯನ್ನು ಮರೆಯುತ್ತಿದ್ದಾನೆ. 'ಆಧುನಿಕ ಯುಗದ ಮಾನವ ತಾರ್ಕಿಕ ಜೀವಿ. ಕನಿಷ್ಠ ಪರಿಶ್ರಮದಿಂದ ಗರಿಷ್ಠ ಹಣಗಳಿಕೆಯೇ ಅವನ ಜೀವನದ ಪರಮೋದ್ದೇಶವಾಗಿದೆ'[7]. ಹಾಗಾಗಿಯೇ ಫಲಕ್ಕೆ ತಕ್ಕ ದುಡಿಮೆ ಮಾಡುತ್ತಿರುವವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ದುಡಿಮೆಯ ಭಾಗಶಃ ಕ್ಷೇತ್ರಗಳಲ್ಲಿ ಮೈಗಳ್ಳರೆ ಹೆಚ್ಚಿದ್ದಾರೆ. ನೇಮಕವಾಗುವಾಗ ಇರುವ ಕಾತುರತೆ ಮತ್ತು ನಿಷ್ಠೆ ನೇಮಕವಾದ ನಂತರ ಇರುವುದಿಲ್ಲ. ಅಲ್ಲಿನ ವ್ಯವಸ್ಥೆ ಕೂಡ ಅವರನ್ನು ಅಪ್ರಮಾಣಿಕರನ್ನಾಗಿಸುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ಮನುಷ್ಯನ ಅಸಡ್ಡೆಗೆ ಮತ್ತಷ್ಟು ಪುಷ್ಟಿ ನೀಡಿದಂತಾಯಿತು. ತಾನು ನಿರ್ವಹಿಸುವ ಕಛೇರಿಗಳಲ್ಲಿ ನಿಷ್ಠೆ ಇಲ್ಲದವರು ಮನೆಯಲ್ಲಿ ನಿಷ್ಠೆ ಪಾಲಿಸುವುದು ಕಷ್ಟದ ಕೆಲಸವೇ ಸರಿ ಎನ್ನುತ್ತಾರೆ ಡುಂಡಿರಾಜರು.

***ಆಫೀಸಿನ ವಾತಾವರಣಕ್ಕೂ***
***ವರ್ಕ್‌ಫ್ರಮ್ ಹೋಮಿಗೂ***
***ವ್ಯತ್ಯಾಸ ಉಂಟು ಕೊಂಚ***
***ಮೈಗಳ್ಳರಿಗೆ ಕಛೇರಿಯಲ್ಲಿ***
***ಕುರ್ಚಿಯಲ್ಲೇ ನಿದ್ರೆ***
***ಮನೆಯಲ್ಲಿ ಬೇಕು ಮಂಚ***

ದಿನದಿಂದ ದಿನಕ್ಕೆ ಹೆಚ್ಚೆಚ್ಚು ಹರಡುತ್ತಿದ್ದ ಕೊರೋನಾ ವೈರಾಣುವಿನಿಂದಾಗಿ ದಿನದ ಎಲ್ಲಾ ಕಾರ್ಯಗಳು ಸ್ತಬ್ಧಗೊಂಡವು, ಮನುಷ್ಯ ತನ್ನ ಜೀವನ ನಿರ್ವಹಣೆಗಾಗಿ ಹಲವು ಮಾರ್ಗೋಪಾಯಗಳನ್ನು ಕಂಡುಹಿಡಿದ. ತಾನು ಇರುವ ಜಾಗದಲ್ಲೇ ಎಲ್ಲಾ ಕೆಲಸಗಳನ್ನು ನಿರ್ವಹಿಸತೊಡಗಿದ. ಹಾಗೂ ತೊಡಗಿಕೊಳ್ಳುವುದು ಅನಿವಾರ್ಯವೂ ಆಗಿತ್ತು. ಅನೇಕ ಸರ್ಕಾರಿ ಮತ್ತು ಖಾಸಗಿ ಕಛೇರಿಗಳಲ್ಲಿ ಸಕಾಲಕ್ಕೆ ಕೆಲಸಗಳಾಗದೆ ದಿನಗಳು, ತಿಂಗಳುಗಳು, ವರ್ಷಗಟ್ಟಲೇ ದಾಟುವುದು ಈ ಅಪ್ರಾಮಾಣಿಕತೆಯಿಂದಲೆ. 'ಲಂಚದ ದೆಸೆಯಿಂದ ಒಂದೇ ರೂಪಾಯಿಯಲ್ಲಿ ಒಂದೇ ದಿನದಲ್ಲಿ ಆಗುವ ಕೆಲಸ ನೂರು ರೂಪಾಯಿಯಲ್ಲಿ ಒಂದು ತಿಂಗಳಿನಲ್ಲಿ ಆಗುತ್ತದೆ'[8]. ಈ ರೀತಿಯ ಭ್ರಷ್ಟಾಚಾರದಿಂದ ಒಬ್ಬ ಸಾಮಾನ್ಯ ಮನುಷ್ಯ ಕೋರ್ಟು ಕಛೇರಿಗಳ ಅಲೆಯುವಿಕೆಯಲ್ಲಿಯೇ ತನ್ನ ಜೀವಮಾನವನ್ನು ಸವೆಸಿರುತ್ತಾನೆ. ದಿನಬೆಳಗಾದರೆ ಕಛೇರಿಗಳ ಮುಂದೆ ಸಾಲುಗಟ್ಟಿ ನಿಂತಿರುತ್ತಾನೆ. ಕೆಲವರು ನಿಶ್ಯಕ್ತಿ ಹೊಂದಿ ಅಲ್ಲಿಯೇ ಮಲಗಿರುವ ಅದೆಷ್ಟೊ ದಿನಗಳನ್ನು ನೋಡಿದ್ದೇವೆ. ಮನುಷ್ಯ ತನ್ನ ಕಾಯಕ ನಿಷ್ಠೆಯನ್ನು ಪಾಲಿಸದೆ ಅಪ್ರಾಮಾಣಿಕನಾದಾಗ ಈ ರೀತಿಯ

ಅನೇಕ ಸಮಸ್ಯೆಗಳು ಉಂಟಾಗುತ್ತವೆ ಎಂಬುದನ್ನು ಕವಿ ಹೀಗೆ ವ್ಯಕ್ತಪಡಿಸುತ್ತಾರೆ.

ಒಂದು ದೇಶ ಮತ್ತು ಅಲ್ಲಿನ ಜನ ಅಭಿವೃದ್ಧಿಯತ್ತ ಸಾಗಬೇಕಾದರೆ ಆರ್ಥಿಕ ಪರಿಸ್ಥಿತಿ ಉತ್ತಮ ರೀತಿಯಲ್ಲಿರಬೇಕು. ಆ ಉತ್ತಮ ಸ್ಥಿತಿಯನ್ನು ಕಾಯ್ದುಕೊಳ್ಳಬೇಕಾದರೆ ದಿನ ನಿತ್ಯದ ವ್ಯಾಪಾರ ವಹಿವಾಟಿನ ಕಾರ್ಯ ವೈಖರಿಗಳ ಪಾತ್ರ ಬಹಳ ಮುಖ್ಯವಾದದ್ದು. ಹಲವು ಲಾಕ್‌ಡೌನ್‌ಗಳ ಪರಿಣಾಮದಿಂದಾಗಿ ಜನ ಜೀವನದ ಸ್ಥಿತಿಗತಿಗಳು ಅಸ್ತವ್ಯಸ್ಥಗೊಂಡಿತು. ಕೊಡು ಕೊಳ್ಳುವಿಕೆ ಹಾಗು ಉತ್ಪಾದನೆಯ ಚಟುವಟಿಕೆಗಳು ಸ್ಥಗಿತಗೊಂಡವು. ಇದರ ಪರಿಣಾಮ ದೇಶದಲ್ಲಿನ ಆರ್ಥಿಕತೆ ಹಾಗೂ ಅನೇಕ ಷೇರು ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಿತು. ತಮ್ಮ ಆದಾಯದಲ್ಲಿನ ಅಭಿವೃದ್ಧಿಗಾಗಿ ಇಂದು ನಾನಾ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದಾರೆ. ಅದರಲ್ಲಿ ಷೇರು ಮಾರುಕಟ್ಟೆಯೂ ಕೂಡ ಒಂದಾಗಿದೆ. 'ಶೇರು ಪೇಟೆಗಳಲ್ಲಿ ಕೈಗಾರಿಕೆಗಳಲ್ಲಿ ಬಂಡವಾಳ ತೊಡಗಿಸುವ ಜನ ಕ್ರಮ ಬದಲಾವಣೆ ಮಾಡಿದಾಗ ಅದು ಅವನ ಜೀವನ ಗತಿಯ ಮೇಲೆ ಅಂಥ ಪರಿಣಾಮ ಮಾಡುವುದೇ ಇಲ್ಲ'[9]. ಹಾಗಾಗಿ ಪ್ರಸ್ತುತದಲ್ಲಿ ಕೋಟ್ಯಾಂತರ ಜನ ಇದರ ಭಾಗವಾಗಿದ್ದಾರೆ. ಯಾವುದೇ ಒಂದು ವಸ್ತುವು ಜನಸಾಮಾನ್ಯರ ಬೇಡಿಕೆಯನ್ನು ಈಡೇರಿಸಿದಾಗ ಅದರ ಉತ್ಪಾದನೆ ಮತ್ತು ಕೊಡುಕೊಳ್ಳುವಿಕೆ ಉತ್ತಮವಾಗಿರುತ್ತದೆ. ಹಾಗೂ ಷೇರು ಮಾರುಕಟ್ಟೆಯಲ್ಲಿ ಆ ವಸ್ತುವಿನ ಷೇರು ಉತ್ತಮ ಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆ. ಹೂಡಿಕೆದಾರರು ಹೆಚ್ಚಾಗುತ್ತಾರೆ. ಹಾಗೂ ಆರ್ಥಿಕ ಪರಿಸ್ಥಿತಿಯೂ ಸಹ ಉತ್ತಮವಾಗಿರುತ್ತದೆ. ಕೊರೋನಾ ಸಂದರ್ಭದಲ್ಲಿ ಬೇಡಿಕೆ ಹಾಗೂ ಉತ್ಪಾದನೆಯಲ್ಲಿ ಹಲವು ಸಮಸ್ಯೆಗಳು ಉಂಟಾದವು ಇದರಿಂದ ಅನೇಕ ಷೇರು ಮಾರುಕಟ್ಟೆಗಳು ನಷ್ಟವನ್ನು ಅನುಭವಿಸಿದವು. ಇದರ ಲಾಭ, ನಷ್ಟಗಳ ಏರಿಳಿತಗಳು ನಿತ್ಯ ನಿರಂತರವಾಗಿರುತ್ತವೆ ಇದನ್ನು ಕವಿ ಡುಂಡಿರಾಜರು ತಮ್ಮದೇ ಧಾಟಿಯಲ್ಲಿ ಹೀಗೆ ಹೇಳಿದ್ದಾರೆ.

***ಕೊರೋನಾ ಆಘಾತ***
***ತಾಳಲಾಗದೆ***
***ಬಿದ್ದಿದೆ ಷೇರು ಬಜಾರು***
***ಆಗಾಗ ಹೀಗೆ***
***ಜಾರಿ ಬೀಳುತ್ತದೆ***
***ಹೆಸರೇ ಷೇರು***
***ಬ–ಜಾರು!***

ಪರೋಕ್ಷವಾಗಿ ಷೇರು ಮಾರುಕಟ್ಟೆಗಳು ಸಹ ಆರ್ಥಿಕ ಪರಿಸ್ಥಿತಿಯ ಒಂದು ಭಾಗವಾಗಿ ಕಾರ್ಯ ನಿರ್ವಹಿಸುತ್ತವೆ. ಇದರ ಲಾಭ, ನಷ್ಟ ಒಂದು ಕಂಪನಿಗಷ್ಟೆ ಅಲ್ಲದೆ ಅರ್ಥವ್ಯವಸ್ಥೆಯಲ್ಲಿಯೂ ಇದರ ಪ್ರಭಾವ ಬೀರುತ್ತದೆ.

ಮನುಷ್ಯ ಇಂದು ವೈಜ್ಞಾನಿಕವಾಗಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದಾನೆ. ಆತನಿಗೆ ಅಸಾಧ್ಯವಾದುದೇ ಇಲ್ಲ ಎನ್ನುವ ರೀತಿಯಲ್ಲಿ ಕಾರ್ಯ ಪ್ರವೃತ್ತನಾಗಿದ್ದಾನೆ. ಪ್ರಕೃತಿಯ ವಿರುದ್ಧವಾಗಿ ನಡೆದುಕೊಂಡು ಅದರಿಂದ ಅನೇಕ ಸಮಸ್ಯೆಗಳು ಎದುರಾದರೂ ಆ ಎಲ್ಲಾ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಬಲ್ಲ ಶಕ್ತಿಯನ್ನು ಹೊಂದುತ್ತಿದ್ದಾನೆ. ಭೂಮಿಯಷ್ಟೆಯಲ್ಲದೆ ಇತರೆ ಗ್ರಹಗಳ ಅಧ್ಯಯನ ಮಾಡಿ ಅಲ್ಲಿಯೇ ವಾಸಿಸುವ ಯೋಜನೆಯನ್ನು ಮಾಡುತ್ತಿದ್ದಾನೆ. ಹೀಗೆ ವೈಜ್ಞಾನಿಕವಾಗಿ ಪ್ರಗತಿ ಸಾಧಿಸಿರುವ ಮನುಷ್ಯನು ಕೆಲವು ಮೂಢನಂಬಿಕೆಗೆ ಒಳಗಾಗಿರುವುದು ವಿಷಾದನೀಯ. ಇಡೀ ಮನುಕುಲವನ್ನೆ ಆವರಿಸಿ ತತ್ತರಗೊಳಿಸಿದ ಕೊರೋನಾವು ಕೋಟ್ಯಾಂತರ ಜೀವಗಳನ್ನು ನುಂಗಿತ್ತು. ದಿಕ್ಕು ತೋಚದ ಜನ ಅವೈಜ್ಞಾನಿಕ ಆಚರಣೆಗಳತ್ತ ಮುಖ ಮಾಡಿದರು. ಗಂಟೆ, ಜಾಗಟೆ, ಆರತಿಗಳ ಭರಾಟೆಯ ಮಧ್ಯದಲ್ಲೇ ಔಷಧಿಗಳ ಕಾಳಸಂತೆ, ನಕಲಿ ಸಸ್ಯೌಷಧಿಗಳ ಮಹಾಪ್ರಚಾರ ನಡೆದವು. 'ಎಲ್ಲ ವಸ್ತುವನ್ನು

ಶಕ್ತಿಯನ್ನು ಪ್ರಕೃತಿ ಒಳಗೊಂಡಿದೆ. ಪ್ರಕೃತಿಯನ್ನು ಮೀರಿದ ಯಾವುದಕ್ಕೂ ವಸ್ತುವಾಗಲಿ, ಶಕ್ತಿಯಾಗಲಿ ಇರಲಾರದು. ಪ್ರಕೃತಿಗೆ ಬಾಹ್ಯನಾದ ದೇವರು ಶೂನ್ಯದಲ್ಲಿದ್ದಾನೆ. ಶೂನ್ಯನೇ ಆಗಿದ್ದಾನೆ. ಇಂಥ ದೇವರನ್ನು ಪೂಜಿಸುವುದು ಮನುಷ್ಯನಿಗೆ ವ್ಯರ್ಥ ಕಾಲಾಹರಣ'[10]. ಆದರೆ ಜಗತ್ತಿನ ಎಲ್ಲಾ ದೇವರುಗಳು ದಿಗ್ಬಂಧನದಲ್ಲಿದ್ದರು ಅಲ್ಲಿಯೂ ಬೆಂಬಿಡದೆ ಹಿಂಬಾಲಿಸಿದ ಮನುಷ್ಯನನ್ನು ನೋಡಿ ಡುಂಡಿರಾಜರು ಹೀಗೆ ಹೇಳಿದ್ದಾರೆ.

*ನಿನ್ನ ಬಳಿ ಈಗ*

*ಬೇರೆ ಏನನ್ನು*

*ಬೇಡುವುದಿಲ್ಲ ಓ ಈಶ್ವರ*

*ಕಾಪಾಡು ನಿನ್ನ*

*ಭಕ್ತ ಜನರನ್ನು*

*ಬರದಂತೆ ಕೊರೊನಾ ಜ್ವರ!*

ಜಗತಿನಾದ್ಯಂತ ಅನೇಕ ಪೂಜೆ, ಪುನಸ್ಕಾರ, ಹೋಮ, ನೈವೇದ್ಯಗಳು ಒಮ್ಮೆಲೆ ಜರುಗಿದವು. ಆದರೆ ಈ ಯಾವ ಪ್ರಯತ್ನಗಳು ಫಲ ಕೊಡಲಿಲ್ಲ. ಕೊನೆಗೆ ವಿಜ್ಞಾನದಿಂದಲೇ ವೈರಾಣುವನ್ನು ಹಿಮ್ಮೆಟ್ಟಿಸಬಲ್ಲ ಲಸಿಕೆಯನ್ನು ತಯಾರಿಸಲಾಯಿತು ಎಂಬುದು ವೈಜ್ಞಾನಿಕ ಸತ್ಯ. ಅನೇಕ ಲಸಿಕೆಗಳನ್ನು ಆವಿಷ್ಕರಿಸಿ ಅವುಗಳ ಅಡ್ಡ ಪರಿಣಾಮಗಳಿಗೂ ಪರಿಹಾರವನ್ನು ಕಂಡುಹಿಡಿದರು. ಇವು ದೇಶ ವಿದೇಶಗಳಲ್ಲಿ ಮೆಚ್ಚುಗೆಯನ್ನು ಪಡೆದು ತ್ವರಿತಗತಿಯಲ್ಲಿ ಜನರಿಗೆ ಕೊಡಲಾಯಿತು. 'ಇನ್ನು ಕೆಲವೇ ಕಾಲದಲ್ಲಿ ಎಲ್ಲ ರೋಗಗಳೂ ಮಾನವನ ಹತೋಟಿಗೆ ಬಂದಾಗ ಮಾನವನ ಭಕ್ತಿ ಆರಾಧನೆಗಳನ್ನು ಆಕರ್ಷಿಸಲು ದೇವರಲ್ಲಿ ಯಾವ ಸಾಧನವೂ ಇಲ್ಲದಾಗುತ್ತದೆ ಆಗ ಪೂಜಾರರ ಬೆದರಿಕೆ ಜನರಿಗೆ ನಗು ಬರುತ್ತದೆ'[11] ಎಂಬ ಮಾತು ಚಿಂತನಾರ್ಹವಾದುದು. ಸಾವಿನ ಬವಣೆಯಿಂದ ನರಳುತ್ತಿದ್ದ ಮನುಷ್ಯನಿಗೆ ಶಕ್ತಿ ತುಂಬಿ ಜೀವ ದಾನ ಮಾಡಿದ್ದು ವಿಜ್ಞಾನವೇ ಹೊರತು ಜನರು ನಂಬಿರುವ ಮೂಢನಂಬಿಕೆಗಳಲ್ಲ ಎಂಬುದನ್ನು ಕವಿ ಡುಂಡಿರಾಜರು ಹೀಗೆ ವಿಡಂಬಿಸಿದ್ದಾರೆ.

ಬದಲಾವಣೆ ಜಗದ ನಿಯಮ. ಆಧುನಿಕರಣದಿಂದಾಗಿ ಇಡೀ ಜಗತ್ತು ಬದಲಾವಣೆಯತ್ತ ಸಾಗಿದೆ. ಆದರೆ ಈ ಬದಲಾವಣೆಯಿಂದಾಗಿ ತನ್ನ ಅಸ್ಥಿತ್ವವನ್ನೆ ಕಳೆದುಕೊಳ್ಳುತ್ತಿದ್ದೇವೆ ಎಂದಾಗ ಅದನ್ನು ತಿರಸ್ಕರಿಸಬೇಕು. ಪ್ರಸ್ತುತ ಮನುಷ್ಯ ಸ್ವಾರ್ಥ ಮನೋಭಾವಕ್ಕೆ ಸಿಲುಕಿ ಗಳಿಕೆಯ ಧಾವಂತಕ್ಕೆ ಬಲಿಯಾಗುತ್ತಿದ್ದಾನೆ. ಮನುಷ್ಯರ ನಡುವಿನ ಸಂಬಂಧವನ್ನು ದೂರ ಮಾಡಿಕೊಳ್ಳುತ್ತಿದ್ದಾನೆ. ಅವಿಭಕ್ತ ಕುಟುಂಬಗಳು ಇಂದು ವಿಭಕ್ತ ಕುಟುಂಬಗಳಾಗುತ್ತಿವೆ. ಗ್ರಾಮೀಣ ಪ್ರದೇಶಗಳೆಲ್ಲ ಇಂದು ನಗರ ಪ್ರದೇಶಗಳಾಗುತ್ತಿವೆ. 'ತೀವ್ರಗತಿಯಲ್ಲಾದ ಔದ್ಯೋಗಿಕ ಕ್ರಾಂತಿ ಮತ್ತು ಅದರ ಪರಿಣಾಮವಾಗಿ ನಡೆದ ನಗರೀಕರಣದ ಪ್ರಕ್ರಿಯೆಗಳು ಕುಟುಂಬದ ಕುಸಿತಕ್ಕೆ ಕಾರಣವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಇದಕ್ಕಿಂತಲೂ ಪ್ರಬಲವಾದ ಕಾರಣವೊಂದಿದೆ ಎಂಬುದನ್ನು ನಾವು ಮರೆಯಬಾರದು ಈ ಅವಧಿಯಲ್ಲಿ ಮನುಷ್ಯನ ಜೀವನ ಶೈಲಿಯನ್ನೇ ಬದಲಿಸಿದ ಬೆಳವಣಿಗೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಅದು ಹಕ್ಕೆಂಬ ಪರಿಕಲ್ಪನೆ. ಇವುಗಳೊಂದಿಗೆ ಭೋಗವಾದವೂ ಸೇರಿ ಕುಟುಂಬದ ಕುಸಿತಕ್ಕೆ ತನ್ನ ಕಾಣಿಕೆಯನರ್ಪಿಸಿತು'[12]. ಆಡಂಬರದ ಜೀವನವನ್ನು ಬಯಸುತ್ತಿರುವ ಮನುಷ್ಯ ತಮ್ಮ ಜೀವನ ಶೈಲಿಯನ್ನು ಬದಲಿಸಿಕೊಂಡು ನೆರೆಹೊರೆಯವರು, ಸಂಬಂಧಿಕರಿಂದ ದೂರ ಸರಿಯುತ್ತಾ ಒಬ್ಬಂಟಿಗನಾಗಿ ದ್ವೇಷ, ಅಸೂಯೆಗಳನ್ನೇ ತುಂಬಿಕೊಳ್ಳುತ್ತಿದ್ದಾನೆ. ಆದರೆ ಇದೆಲ್ಲವನ್ನು ದೂರ ಮಾಡಲು ಕೊರೋನಾ ಪರೋಕ್ಷವಾಗಿ ಸಹಕಾರಿಯಾಯಿತು. ಶಾಶ್ವತವಲ್ಲದ ಈ ದೇಹದ ನಶ್ವರತೆಯನ್ನು ತೋರಿಸಿತು. ಮನುಷ್ಯ ಸಂಬಂಧದ ಮಹತ್ವವನ್ನು ತಿಳಿಸುತ್ತಾ, ದ್ವೇಷ, ಅಸೂಯೆ, ವೈರತ್ವಗಳನ್ನು ಮರೆತು ಒಬ್ಬರಿಗೊಬ್ಬರು ಸಹಾಯ

ಹಸ್ತ ನೀಡಿ ಒಗ್ಗಟ್ಟಿನಿಂದ ಸಹಬಾಳ್ವೆ ಮಾಡುವುದನ್ನು ಕಲಿಸಿತು ಎಂಬುದನ್ನು ಡುಂಡಿರಾಜರು ತಮ್ಮದೇ ಧಾಟಿಯಲ್ಲಿ ಹೀಗೆ ಹೇಳಿದ್ದಾರೆ.

***ಇಡೀ ಜಗತ್ತನ್ನೇ ತನ್ನ***
***ತಾಳಕ್ಕೆ ಕುಣಿಸುತ್ತಿದೆ***
***ಕಣ್ಣಿಗೆ ಕಾಣದ ವೈರಾಣು***
***ಕೊರೊನಾ ಮಣಿಸಲು***
***ಒಗ್ಗಟ್ಟು ಬೇಕು***
***ಮರೆಯೋಣ ವೈರವನ್ನು***

ಸಂಬಂಧ ಕಡಿದುಕೊಂಡು ದೂರಾಗುತ್ತಿದ್ದವನಿಗೆ ಒಗ್ಗೂಡಿಸಿ ಜೀವನದ ಮೌಲ್ಯವನ್ನು, ಒಗ್ಗಟ್ಟಿನ ಬಲವನ್ನು ತಿಳಿಸಿತು. ಹೀಗೆ ಮನುಷ್ಯನ ಅಜ್ಞಾನ, ದುರಾಸೆ, ಇತರೆ ಜೀವಿಗಳ ಬಗೆಗಿನ ಅಸಡ್ಡೆಯಿಂದಾಗಿಯೇ ನಿಸರ್ಗ ನಾಶವಾಗುತ್ತಿದೆ. ಮಾನವ ಸಂಬಂಧ ಮರೆಯಾಗುತ್ತಿದೆ. ಇಂದಿನವರಿಗಷ್ಟೆಯಲ್ಲದೇ ನಾಳಿನ ಉಳಿವಿಗೆ ಏನೇನು ಎಂಬ ಪ್ರಶ್ನೆಗಳಿಗೆ ನೈತಿಕವಾದ ಉತ್ತರ ಸಿಗಬೇಕಿದೆ. ಇತರ ಜೀವರಾಶಿಯನ್ನು ಹೊಸಕಿ ಹಾಕಿದ್ದೂ, ನಮ್ಮವರೇ ಹಸಿವಿನಿಂದ ಸಾವನಪ್ಪುತ್ತಿರುವುದೂ ಈ ವೈಫಲ್ಯಗಳ ದ್ಯೋತಕವಾಗಿದೆ. ನಮ್ಮ ಮೇಲೆ ಅಪಾರ ಹೊಣೆ ಇದೆ. ಅದನ್ನು ನಿಭಾಯಿಸುವ ಸಾಮರ್ಥ್ಯವೂ ನಮಗಿಲ್ಲವೆಂದಲ್ಲ ಆದರೆ, ಬದ್ಧತೆ ಇಲ್ಲ. 'ಇದೀಗ ಬಿರುಬಿಸಿಲಿನಲ್ಲಿ ನೀರಿನ ಅಭಾವದಿಂದ ಚಡಪಡಿಸುತ್ತಿರುವ ನಾಗರಿಕರು ಜಾಗತಿಕ ತಾಪಮಾನ ಏರಿಕೆ ತಕ್ಷಣದ ಪರಿಣಾಮಗಳು ಹಾಗೂ ಭವಿಷ್ಯದ ಅಪಾಯಗಳ ಬಗ್ಗೆ ಒಂದಿಷ್ಟು ಅರಿವು ಮೂಡಿಸಿಕೊಂಡಂತೆ ಅಸ್ಪಷ್ಟವಾಗಿ ಕಾಣಿಸುತ್ತಿದೆ. ಹವಾಮಾನದಲ್ಲಿ ಅಲ್ಲ, ತಮ್ಮಲ್ಲಿ ಬದಲಾವಣೆ ಆಗಬೇಕಿದೆ ಎಂದು ಕೆಲವರಿಗಾದರೂ ಅನ್ನಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೆ ಈ ಪಾಠ ಕೂಡ ಕೋವಿಡ್ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಕಾಣಿಸಿಕೊಂಡು ಮಾಯವಾದ ಕೊರೋನಾ ವೈರಾಗ್ಯ ಆಗಬಾರದಷ್ಟೆ!'[13]. ಹಾಗಾಗಿ ಪರಿಸರದ ಅಳಿವು ಉಳಿವಿನ ಜವಾಬ್ದಾರಿ ನಮ್ಮ ಮೇಲಿದೆ ಈಗಲಾದರೂ ಕಾರ್ಯಪ್ರವೃತ್ತರಾಗಬೇಕಿದೆ.

ಆ ಹಿನ್ನೆಲೆಯಲ್ಲಿ ಕೊರೋನಾ ವಿನಾಶಕಾರಿ ವೈರಾಣುವಾದರೂ ಮನುಷ್ಯನಿಗೆ ಇದು ಪರೋಕ್ಷವಾಗಿ ಸಹಕಾರಿಯೂ ಆಗಿದೆ ಎಂಬುದನ್ನು ಕವಿ ಡುಂಡಿರಾಜರು ಅದರ ಸೂಕ್ಷ್ಮತೆಯನ್ನು ಗ್ರಹಿಸಿ ತಮ್ಮದೇ ಧಾಟಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಕೊರೋನಾ ಸನ್ನಿವೇಶದಲ್ಲಿ ಎದುರಾದ ಅನೇಕ ಸಮಸ್ಯೆಗಳು, ಸಾವು, ನೋವುಗಳಿಂದ ಕಲಿತ ಪಾಠ ಹಾಗೂ ರೂಢಿಸಿಕೊಳ್ಳಬೇಕಾದ ಜೀವನ ಶೈಲಿ ಹೀಗೆ ಅನೇಕ ವಿಷಯಗಳನ್ನು ತಮ್ಮ ಹನಿಗವನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಕೊರೋನಾವು ಪ್ರಪಂಚದಲ್ಲೇ ಮೊಟ್ಟ ಮೊದಲ ಬಾರಿಗೆ 2019 ಡಿಸೆಂಬರ್ 8ನೇ ತಾರೀಖಿನಂದು ಚೀನಾದ ವೂಹಾನ್ ಪ್ರದೇಶದಲ್ಲಿ ಕಾಣಿಸಿಕೊಂಡಿತು. ಅತೀ ಜನದಟ್ಟಣೆಯ ಚೀನಾದ ಪ್ರತಿಷ್ಠಿತ ವೈರಾಣು ಶಾಸ್ತ್ರದ ಸಂಸ್ಥೆ ಇರುವ ಈ ಭಾಗದಲ್ಲಿ ಹಲವು ವೈರಲ್ ನ್ಯೂಮೋನಿಯಾ ಕೇಸ್‌ಗಳು ಪತ್ತೆಯಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿತ್ತು. '2019ರ ಡಿಸೆಂಬರ್ 31ರಂದು 27 ಜನಕ್ಕೆ ಅಪರಿಚಿತ ವೈರಾಣುವಿನಿಂದ ನ್ಯೂಮೋನಿಯಾ ಬಂದಿದೆ ಎಂದು ಚೀನಾ ಪ್ರಕಟಿಸಿತು. 2020 ಜನವರಿ 02ರಂದು ಈ ವೈರಾಣು ಒಂದು ಹೊಸ ಕೊರೋನಾ ವೈರಸ್ ಎಂದು ಆದೇಶಿಸಿತು. 2020 ಫೆಬ್ರವರಿ 11 ರಿಂದ ಈ ಹೊಸ ವೈರಾಣುವಿಗೆ SARS-COV-2 ಮತ್ತು ಕೋವಿಡ್–19 ಎಂದು ವಿಶ್ವ ಆರೋಗ್ಯ ಸಂಸ್ಥೆ ನಾಮಕಾರಣ ಮಾಡಿತು'.[14] 2020 ಜನವರಿ 23ರಂದು ವೂಹಾನ್ ನಗರಕ್ಕೆ ಬೀಗ ಮುದ್ರೆ ಹಾಕಲಾಯಿತು. ಕೆಲವೇ ದಿನಗಳಲ್ಲಿ ಇದು ವಿಶ್ವದಾದ್ಯಂತ ವ್ಯಾಪಿಸಿ ಸಾವು ನೋವುಗಳನ್ನು ಉಂಟು ಮಾಡತೊಡಗಿತು. 'ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಜಗತ್ತಿನಾದ್ಯಂತ ಕೊರೋನಾ ವೈರಸ್ ದೃಢಪಟ್ಟಿರುವವರ ಸಂಖ್ಯೆ 77,76,91,501 ಇದರಲ್ಲಿ 70,93,267 ಜನರು ಈ ವೈರಾಣುವಿನಿಂದ

ಸಾವನ್ನಪ್ಪಿರುತ್ತಾರೆ. ಭಾರತದಲ್ಲಿ ಕೋವಿಡ್–19 ಪ್ರಕರಣವು 2020 ಜನವರಿ 30 ರಂದು ಕೇರಳದಲ್ಲಿ ಕಂಡುಬಂದಿದ್ದು, ದೇಶದಲ್ಲಿ ಒಟ್ಟು 4,50,44,621 ಜನರು ವೈರಸ್‌ಗೆ ತುತ್ತಾಗಿದ್ದಾರೆ. ಇದರಲ್ಲಿ 5,33,662 ಜನರು ಸಾವನಪ್ಪಿದ್ದಾರೆ'.[15] ಪ್ರಸ್ತುತಕ್ಕೂ 5 ಪ್ರಕರಣಗಳು ಸಕ್ರಿಯವಾಗಿವೆ. ನಮ್ಮ ರಾಜ್ಯ ಕರ್ನಾಟಕಕ್ಕೆ ಬಂದರೆ, ಒಟ್ಟು 40,57,144 ಜನರಿಗೆ ಈ ವೈರಾಣು ದೃಢಪಟ್ಟಿದ್ದು, ಇದರಲ್ಲಿ 40,411 ಜನರು ಸಾವನ್ನಪ್ಪಿರುತ್ತಾರೆ. ಈ ಮೇಲಿನ ಎಲ್ಲಾ ಸಾವು ನೋವಿನ ಕಾರಣದಿಂದಾಗಿ ಆರ್ಥಿಕ ಮತ್ತು ಶೈಕ್ಷಣಿಕ ವಲಯಕ್ಕೆ ಸಾಕಷ್ಟು ನಷ್ಟವು ಸಹ ಉಂಟಾಗಿದೆ. '2021ರ UNESCO ವರದಿಗಳ ಪ್ರಕಾರ ಕೋವಿಡ್–19 ಸಾಂಕ್ರಾಮಿಕ ರೋಗವು ಪ್ರಪಂಚದಾದ್ಯಂತ 10ರಲ್ಲಿ 9 ವಿದ್ಯಾರ್ಥಿಗಳಿಗೆ ಮುಖಾಮುಖಿ ತರಗತಿಗೆ ಅಡ್ಡಿಯುಂಟಾಗಿದೆ. ಜಾಗತಿಕವಾಗಿ 195 ದೇಶಗಳು ತಮ್ಮ ಎಲ್ಲ ಶಾಲೆಗಳು ಮುಚ್ಚಿದವು, ಪೂರ್ವ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ 1.5 ಶತಕೋಟಿ ವಿದ್ಯಾರ್ಥಿಗಳಿಗೆ ಇದು ಪರಿಣಾಮ ಬೀರಿರುತ್ತದೆ'.[16] ಪತ್ರಿಕಾ ಮಾಹಿತಿ ಬ್ಯೂರೋ ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಪ್ರಕಾರ '2020–21ರಲ್ಲಿ ಜಿಡಿಪಿಯ ಬೆಳವಣಿಗೆಯು –6.6 ಕುಂಠಿತಗೊಂಡಿತು'[17] ಎಂದು ವರದಿ ಹೇಳುತ್ತದೆ. ಹೀಗೆ ಕರೋನಾದಿಂದ ಸಾಕಷ್ಟು ನಷ್ಟಗಳು ಉಂಟಾಗಿದ್ದು, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳು ರೂಪುಗೊಂಡವು. ಇಂತಹ ಕೊರೋನಾಗೆ ವಿಜ್ಞಾನ, ಅರ್ಥಶಾಸ್ತ್ರ ಸ್ಪಂದಿಸಿರುವ ರೀತಿಯಲ್ಲಿಯೇ ಸಾಹಿತ್ಯವೂ ಸ್ಪಂದಿಸಿದೆ. ಈ ಎಲ್ಲಾ ಮಾಹಿತಿಗಳನ್ನು ಕೇವಲ ತಿಳಿದುಕೊಳ್ಳುವುದಷ್ಟೇ ಅಲ್ಲದೇ ಅದರ ಆಗು–ಹೋಗುಗಳನ್ನು ವಿಶ್ಲೇಷಿಸುವಂತೆ ಮಾಡುವುದು ಸಾಹಿತ್ಯ. ಈ ನಿಟ್ಟಿನಲ್ಲಿ ಡುಂಡಿರಾಜ್ ಅವರ ಹನಿಗವನ ಚಿಕ್ಕದಾಗಿದ್ದರೂ ಅಗಾಧವಾದ ವಿಷಯವನ್ನು ತಿಳಿಸಿಕೊಡುತ್ತದೆ.

ಹೀಗೆ ಯಾವುದೇ ಒಂದು ಸಾಹಿತ್ಯ ವಾಸ್ತವ ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಾಗ ಆ ಸಾಹಿತ್ಯ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ. ಜೊತೆಗೆ ಅದು ಸಾಮಾನ್ಯ ಓದುಗನಿಗೂ ತಲುಪಿದಾಗ ತನ್ನ ಗಟ್ಟಿತನವನ್ನು ಉಳಿಸಿಕೊಳ್ಳುತ್ತದೆ. ಆ ಹಿನ್ನೆಲೆಯಲ್ಲಿ ಡುಂಡಿರಾಜರ ಹನಿಗವನಗಳು ಪ್ರಾಮುಖ್ಯತೆಯನ್ನು ಪಡೆದಿದ್ದು ಕನ್ನಡ ಸಾಹಿತ್ಯಕ್ಕೆ ತನ್ನದೇ ಕೊಡುಗೆಯನ್ನು ನೀಡುತ್ತಿವೆ ಮತ್ತು ಓದುಗರನ್ನು ತಲುಪುತ್ತಿವೆ.

**ಕೊನೆಟಿಪ್ಪಣಿಗಳು**


1. ನಾಗೇಶ್ ಹೆಗಡೆ. (2018). *ಇರುವುದೊಂದೆ ಭೂಮಿ.* ಭೂಮಿ ಬುಕ್ಸ್, ಪು.ಸಂ.23
2. ನಾಗೇಶ್ ಹೆಗಡೆ. (2024, ಮಾರ್ಚ್ 14). ಪ್ರಜಾವಾಣಿ ಪತ್ರಿಕೆ. ಪು.ಸಂ.10
3. ದೇಜಗೌ (1995). *ವಿಸ್ಮಯಗಳ ನಾಡಿನಲ್ಲಿ.* ಸಂವಹನ ಪ್ರಕಾಶನ. ಪು.ಸಂ.281
4. ವೀರಪ್ಪ, ಕೆ. ಎಂ. (1992). *ಹಸಿರು ನಮ್ಮ ಉಸಿರು.* ಶಕುಂತಲ ಪ್ರಕಾಶನ. ಪು.ಸಂ.243
5. ದೇವಿಂದರ್ ಶರ್ಮ. (2024, ಏಪ್ರಿಲ್ 15). *ಪ್ರಜಾವಾಣಿ ಪತ್ರಿಕೆ.* ಪು.ಸಂ.15
6. ಬೋರಲಿಂಗಯ್ಯ ಹಿ. ಚಿ. (1995). *ಕಾಡು, ಕಾಂಕ್ರೀಟ್ ಮತ್ತು ಜಾನಪದ.* ಅಕ್ಷರ ಪ್ರಕಾಶನ. ಪು.ಸಂ.01
7. ಪೆರ್ಲ ಮಾ. ಬಾ. (2000). *ಭಾರತೀಯ ವಿವಾಹ ಸಂಸ್ಕಾರ.* ಕನ್ನಡ ಪ್ರಪಂಚ ಪ್ರಕಾಶನ, ಪು.ಸಂ.60
8. ಪೂರ್ಣಚಂದ್ರ ತೇಜಸ್ವಿ ಕೆ. ಪಿ. (2014). *ಹೊಸ ವಿಚಾರಗಳು.* ಪುಸ್ತಕ ಪ್ರಕಾಶನ. ಪು.ಸಂ.92
9. ಅದೇ. ಪು.ಸಂ.30
10. ವಸುದೇವ ಭೂಪಾಲ (1984). ದೇವರು ಸತ್ತ. *ಸಂಯುಕ್ತ ಕರ್ನಾಟಕ.* ಪುಟ. 51
11. ಅದೇ. ಪು.ಸಂ.87
12. ಪೆರ್ಲ ಮಾ. ಬಾ. (2000). *ಪೂರ್ವೋಕ್ತ.* ಪು.ಸಂ.24
13. ಚಂದ್ರಕಾಂತ ವಡ್ಡು. (2024, ಏಪ್ರಿಲ್ 13). *ಪ್ರಜಾವಾಣಿ ಪತ್ರಿಕೆ.* ಪು.ಸಂ.08

14. ಚಂದ್ರಶೇಖರ್ ಸಿ.ಆರ್. (2021). *ಕೋವಿಡ್–19.* ಸಪ್ನ ಬುಕ್‌ಹೌಸ್. ಪು.ಸಂ.19
15. World Health Organization (WHO). *WHO Covid-19 dashboard-WHO data*. https://data.who.in
16. *The Impact of Covid-19 on Education and Education sectors.*
17. *Summary of the Economic Survey 2022-23*

https://www.pib.gov.in/pressreleaseshare.aspx? PRID=1894932

**ಪರಾಮರ್ಶನ ಗ್ರಂಥಗಳು**

- ಚಂದ್ರಶೇಖರ್, ಸಿ.ಆರ್. (2020). *ಕೋವಿಡ್–19.* ಸಪ್ನ ಬುಕ್‌ಹೌಸ್.
- ದೇಜಗೌ. (1995). *ವಿಸ್ಮಯಗಳ ನಾಡಿನಲ್ಲಿ.* ಸಂವಹನ ಪ್ರಕಾಶನ.
- ಡುಂಡಿರಾಜ್, ಎಚ್. (2020). *ಕೊರೊನಾರೀ ಸಹೋದರ.* ಅಂಕಿತ ಪುಸ್ತಕ ಪ್ರಕಾಶನ.
- ನಾಗೇಶ್ ಹೆಗಡೆ. (2018). *ಇರುವುದೊಂದೆ ಭೂಮಿ.* ಭೂಮಿ ಬುಕ್ಸ್.
- ಪೂರ್ಣಚಂದ್ರ ತೇಜಸ್ವಿ ಕೆ. ಪಿ. (2014). *ಹೊಸ ವಿಚಾರಗಳು.* ಪುಸ್ತಕ ಪ್ರಕಾಶನ.
- ಸತ್ಯ ನಾರಾಯಣ, ಎಚ್.ಎಸ್., ಎನ್.ರಾಮನಾಥ್. (2020), *ಡುಂಡಿಮಲ್ಲಿಗೆ.* ತೇಜು ಪಬ್ಲಿಕೇಷನ್.
- ವಸುದೇವ ಭೂಪಾಲ (1984). ದೇವರು ಸತ್ತ. *ಸಂಯುಕ್ತ ಕರ್ನಾಟಕ.* ವೀರಪ್ಪ ಕೆ. ಎಂ. (1992). *ಹಸಿರು ನಮ್ಮ ಉಸಿರು.* ಶಕುಂತಲ ಪ್ರಕಾಶನ.